(ಇಂದು ದಿನಾಂಕ: 16-06-2025 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

ಪಾಟೀಸವಾಲು: ಶ್ರೀ ಕೆ ಬಿ ಜಿ ಪ್ರತಿವಾದಿಯರ ಪರ ವಕೀಲರಿಂದ:

1. ದಾವಾ ಸರ್ವೇ ನಂ.122 ಇದು ನನ್ನ ತಾಯಿ ಗ್ಯಾನಮ್ಮ/ಪ್ರತಿವಾದಿ ನಂ.1 ಇವರ ಹೆಸರಲ್ಲಿ ಇದೆ. ಸದರಿ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ನಾನು ಕೇವಲ ಎರಡೇ ಪಹಣಿ ಸಲ್ಲಿಸಿರುತ್ತೇನೆ ಎಂದರೆ ಸರಿ. ನನ್ನ ಮದುವೆಯಾಗಿ 27 ವರ್ಷ ಆಗಿರುತ್ತದೆ. ನನಗೆ ಐದು ಜನ ಮಕ್ಕಳು. ನನ್ನ ತಂದೆ ಜೀವಂತ ಇರುವಾಗ ನನ್ನ ಮದುವೆಯಾಗಿರುತ್ತದೆ. ಉಳಿದ ನನ್ನ ಸಹೋದರ ಸಹೋದರಿಯರ ಮದುವೆ ನನ್ನ ತಾಯಿ ಗ್ಯಾನಮ್ಮ/ಪ್ರತಿವಾದಿ ನಂ.1 ಮಾಡಿರುತ್ತಾರೆ. ನಾನು ಗುಂಜಳ್ಳಿ ಗ್ರಾಮದಲ್ಲಿ ವಾಸವಾಗಿದ್ದೇನೆ. ನನ್ನ ತಾಯಿ ಗ್ಯಾನಮ್ಮ/ಪ್ರತಿವಾದಿ ನಂ.1 ಮತ್ತು ಬೀರಪ್ಪ ರವರೇ ಇಂದಿಗೂ ಸಹ ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ಅವರೇ ಇಂದಿಗೂ ಉಳುಮೆ ಮಾಡುತ್ತಿದ್ದು ನನಗೆ ಬಂದ ಬೆಳೆಯಲ್ಲಿ ಭಾಗ ಕೊಟ್ಟಿಲ್ಲ ಎಂದರೆ ಸರಿ. ನನ್ನ ತಾಯಿ ಗ್ಯಾನಮ್ಮ/ಪ್ರತಿವಾದಿ ನಂ.1 ರವರು ನನ್ನ ಅಕ್ಕ ತಂಗಿಯರ ಮದುವೆ ಮಾಡಲು ಸಾಲ ಮಾಡಿದ್ದಾರೆ ಎಂದರೆ ಸರಿಯಲ್ಲ. ಬ್ಯಾಂಕಿನಲ್ಲಿ ನನ್ನ ತಾಯಿ ಗ್ಯಾನಮ್ಮ/ಪ್ರತಿವಾದಿ ನಂ.1 ರವರು ಸಾಲ ಮಾಡಿದ್ದಾರೆ ಮತ್ತು ಖಾಸಗಿ ಕೈಗಡ ಸಾಲ ಕೂಡಾ ಮಾಡಿದ್ದಾರೆ ಎಂದರೆ ಸರಿಯಲ್ಲ. ನನಗೆ ಏನೂ ಕೊಡದೇ ಮದುವೆ ಮಾಡಿದ್ದಾರೆ. ಉಳಿದವರಿಗೆ ಬೇರೆಯವರಿಗೆ ಕೊಟ್ಟ ರೀತಿ ವರೋಪಚಾರ ಮಾಡಿ ಮದುವೆ ಮಾಡಿ ಕೊಟ್ಟಿದ್ದಾರೆ.

2. ತಾಯಿ ಗ್ಯಾನಮ್ಮ/ಪ್ರತಿವಾದಿ ನಂ.1 ರವರ ತಂದೆ ಕಡೆಯಿಂದ ದಾವಾ ಆಸ್ತಿ ಅನಸೂಚಿ ಸಂಖ್ಯೆ 2 ಬಂದಿರುತ್ತದೆ ಎಂದರೆ ಸರಿ. ಸದರಿ ಆಸ್ತಿ ಹೆಣ್ಣು ಆಸ್ತಿ ಎಂದರೆ ಸರಿ. ಸದರಿ ಆಸ್ತಿ ತಾಯಿ ಗ್ಯಾನಮ್ಮ/ಪ್ರತಿವಾದಿ ನಂ.1 ರವರ ಮದುವೆ ಸಂದರ್ಭದಲ್ಲಿ ಕೊಡಲಾಗಿದ್ದು, ಅದಕ್ಕೆ ಸಂಬಂಧಪಟ್ಟಂತೆ ಮ್ಯೂಟೇಶನ್ ಕೂಡಾ ಆಗಿರುತ್ತದೆ ಎಂದರೆ ಸರಿ. ತಾಯಿ ಗ್ಯಾನಮ್ಮ/ಪ್ರತಿವಾದಿ ನಂ.1 ರವರ ತಂದೆ ಕಡೆಯಿಂದ ದಾವಾ ಆಸ್ತಿ ಅನಸೂಚಿ ಸಂಖ್ಯೆ 2 ಬಂದಿದ್ದರಿಂದ ಅದರ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ. ನನ್ನ ತಂದೆಯ ಮರಣಾನಂತರ

ತಾಯಿ ಗ್ಯಾನಮ್ಮ/ಪ್ರತಿವಾದಿ ನಂ.1 ಮತ್ತು ಬೀರಪ್ಪ ಇಬ್ಬರೇ ದಾವಾ ಆಸ್ತಿ ಸಂಖ್ಯೆ 1 ನೇದ್ದರಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. 5-6 ವರ್ಷಗಳ ಹಿಂದೆ ಗ್ಯಾನಮ್ಮ ಮದುವೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ನನ್ನ ತಂಗಿ ನಾಗಮ್ಮನ ಮದುವೆಗೆ ಹೋಗಿಲ್ಲ. ಅವರ ಕುಟುಂಬದ ಜೊತೆ ಕಳೆದ 10 ವರ್ಷಗಳಿಂದ ನನ್ನ ಸಂಬಂಧ ಸರಿಯಿಲ್ಲ. ಇಲ್ಲಿಯವರೆಗೂ ನಾನು ಅವರ ಮನೆಗೆ ಹೋಗಿಲ್ಲ. ನನಗೆ 10 ತೊಲೆ ಬಂಗಾರ ಮತ್ತು 2 ಲಕ್ಷ ನಗದು ಹಣ ನನಗೆ ಹಿಸ್ಸೆ ರೂಪದಲ್ಲಿ ಕೊಟ್ಟಿರುತ್ತಾರೆ, ನನಗೆ ದಾವಾ ಆಸ್ತಿ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಭಾಗ ಕೇಳಿ ಪ್ರತಿವಾದಿಯರ ಮನೆಗೆ ಹೋಗಿಲ್ಲ, ನೇರವಾಗಿ ನ್ಯಾಯಾಲಯಕ್ಕೆ ದಾವೆ ಸಲ್ಲಿಸಿದ್ದೇನೆ. ದಾವಾ ಆಸ್ತಿಗಳ ಸರ್ವೇ ನಂಬರ ಗೊತ್ತಿಲ್ಲ. ಕಳೆದ ಮೂರು ವರ್ಷಗಳಿಂದ ನಾನು ದಾವಾ ಜಮೀನು ನೋಡಿಲ್ಲ. ನನಗೆ ಯಾವುದೇ ಭಾಗ ಇಲ್ಲ, ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತುಂಬಾ ಸಾಲ ಇದೆ ಅವರಿಗೆ ತುಂಬಾ ಕಷ್ಟ ಇದೆ ಎಂದರೆ ಸರಿಯಲ್ಲ. ನನಗೆ ಭಾಗ ಇದೆ ಅಂತಾ ನಾನು ನನ್ನ ವಕೀಲರಿಗೆ ದಾವಾ ಆಸ್ತಿಯಲ್ಲಿ ನಾನು ಕುಟುಂಬದ ಸದಸ್ಯರ ಪರವಾಗಿ ಸ್ವಾಧೀನದಲ್ಲಿ ಇದ್ದೇನೆ ಅಂತಾ ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು